

ಗಿರೀಶ ಕಾರ್ನಾಡ ಹಾಗೂ ಪೂರ್ಣಚಂದ್ರ ತೇಜಸ್ವಿಯವರೊಂದಿಗೆ ಕೆ.ಎಂ. ಚೈತನ್ಯ

ಮನೆಗೆ ಹೋಗುತ್ತಿದ್ದೆ. ಭಾರತದಿಂದ ಕಲಾವಿದರು, ಸಿನಿಮಾ, ಸಾಹಿತ್ಯಕ್ಕೆ ಸಂಬಂಧಪಟ್ಟವರು ಬಂದಾಗ ಕಾರ್ನಾಡರು ನನಗೆ ಬರಲು ಹೇಳಿ ಅವರೆಲ್ಲರನ್ನು ಪರಿಚಯಿಸುತ್ತಿದ್ದರು.

ನಾನು ಸಾಕ್ಷ್ಯಚಿತ್ರ ಮಾಡಿದ ಸಂಸ್ಥೆ ಒಮ್ಮೆ ಇಂಗ್ಲೆಂಡಿನ ಹೌಸ್ ಆಫ್ ಲಾರ್ಡ್ಸ್‌ನಲ್ಲಿ ರಾತ್ರಿ ಔತಣಕೂಟಕ್ಕೆ ಆಹ್ವಾನ ನೀಡಿದರು. ಕಾರ್ನಾಡರಿಗೆ ಫೋನ್ ಮಾಡಿ ಹೇಳಿದಾಗ ನನಗಿಂತ ಹೆಚ್ಚು ಸಂಭ್ರಮಪಟ್ಟರು. ನಮ್ಮಲ್ಲಿ ರಾಜ್ಯಸಭೆ ಇದ್ದಹಾಗೆ ಇಂಗ್ಲೆಂಡ್‌ನಲ್ಲಿ 'ಹೌಸ್ ಆಫ್ ಲಾರ್ಡ್ಸ್'. ಅಲ್ಲಿ ಡಿನ್ನರ್‌ಗೆ ಆಹ್ವಾನ ದೊರೆತದ್ದು ಸಂತೋಷದ ವಿಷಯ ಎಂದು ಹೇಳಿದ ಅವರು ಕೂಡಲೇ 'ನಿಮಗೆ ಫೋರ್ಕ್ ಮತ್ತು ಚಾಕು ಬಳಸಿ ಊಟ ಮಾಡಲು ಅಭ್ಯಾಸ ಇದೆಯ?' ಎಂದು ಕೇಳಿದರು. 'ಮೇನೇಜ್ ಮಾಡ್ತೀನಿ' ಎಂದು ನಕ್ಕೆ. 'ನಾಡಿದ್ದು ಮಧ್ಯಾಹ್ನ ಮನೆಗೆ ಬನ್ನಿ' ಎಂದು ಹೇಳಿ ಫೋನ್ ಇಟ್ಟರು.

ಕಾರ್ನಾಡರು ಹೇಳಿದಂತೆ ಅವರ ಮನೆಗೆ ಹೋದೆ. ಅವರ ಅಡುಗೆಯವನು ಎರಡು ತಟ್ಟೆ ಹಾಗೂ ಕೆಲವು ಬ್ರೆಡ್ ತುಂಡುಗಳನ್ನು ತಂದ. ಸುಮಾರು ಅರ್ಧ ಗಂಟೆ ಕಾರ್ನಾಡರು ನನಗೆ ಫೋರ್ಕ್ ಮತ್ತು ಚಾಕು ಬಳಸಿ ತಿನ್ನುವುದು ಹೇಗೆ ಎಂದು ಕಲಿಸಿಕೊಟ್ಟರು. ಔತಣಕೂಟಕ್ಕೆ ಹೋದಾಗ ಒಂದು ಒಳ್ಳೆಯ ಸೂಟ್ ಹಾಕಿಕೊಂಡು ಹೋಗಬೇಕು ಎಂದು ಹೇಳಿ, ಅವರು ತಮ್ಮ ವಿದ್ಯಾರ್ಥಿ ದಿನಗಳಲ್ಲಿ ಮೊದಮೊದಲು ಕೊಂಡ ಟೈಲರ್ ಬಳಿ ಕರೆದುಕೊಂಡು ಹೋಗಿ, ಹೊಸ ಸೂಟ್ ಕೊಳ್ಳಲು ಸಹಾಯ ಮಾಡಿದರು. '**Book of English etiquette**' ಎಂಬ ಪುಸ್ತಕ ಕೊಟ್ಟು 'ಇದನ್ನು ಓದಿ, ಇಂಗ್ಲಿಷ್ ಸಂಸ್ಕೃತಿಯ ಕೆಲವು ಸೂಕ್ಷ್ಮಗಳ ಬಗ್ಗೆ ಕೆಲವು ಟಿಪ್ಪಣಿಗಳು ಸಿಗುತ್ತೆ. ನಾವು ಇದನ್ನ ಪಾಲಿಸಬೇಕು ಅಂತಿಲ್ಲ. ಆದರೆ ಪ್ರತಿಯೊಂದು ಸಂಸ್ಕೃತಿ ಎಷ್ಟು ವಿಭಿನ್ನ ಎನ್ನುವುದನ್ನು ಇದರಲ್ಲಿ ಗಮನಿಸಬಹುದು' ಎಂದರು.

ಇಂಗ್ಲೆಂಡ್ ಪಕ್ಕದ ಸ್ಕಾಟ್ಲೆಂಡ್‌ನ ಎಡಿನ್‌ಬರೊ ಊರಿನಲ್ಲಿ ಪ್ರತಿ ವರ್ಷ ನಡೆಯುವ ನಾಟಕೋತ್ಸವ